

# ಸಸ್ಯಜನ್ಯ ಚರ್ಮದ ಬ್ಯಾಗ್!



■ ರೂಪಾ ಕೆ.ಎಂ

ಫ್ಯಾಷನ್ ಲೋಕದಲ್ಲಿ ತರಹೇವಾರಿ ಪ್ರಾಣಿಗಳ ಚರ್ಮದ ಬ್ಯಾಗುಗಳಿಗೆ ದೊಡ್ಡ ಮಟ್ಟದ ಬೇಡಿಕೆ ಇದೆ. ಭಿನ್ನ ಬಗೆಯ ಬ್ಯಾಗ್ ತಯಾರಿಸಲು ಪ್ರಾಣಿಗಳ ಚರ್ಮ ಸುಲಿಯುವುದು ಸರಿಯಲ್ಲ ಎಂದು ಆಕ್ಷೇಪಿಸುವ ದೊಡ್ಡ ವರ್ಗವೂ ಇದೆ. ಪ್ರಾಣಿಪ್ರಿಯರ ಸಂಘಟನೆಗಳು ಚರ್ಮವನ್ನು ಹೀಗೆಲ್ಲ ಬಳಸುವುದರ ವಿರುದ್ಧ ಆಗಾಗ್ಗೆ ಹೋರಾಟ ನಡೆಸಿವೆ.

ವಾದ ಪ್ರತಿವಾದಗಳ ಮಧ್ಯೆಯೂ ಅಪರೂಪದ ಸಂಶೋಧನೆಯಿಂದಾಗಿ ಭರವಸೆಯೊಂದು ಚಿಗುರಿದೆ. ಈ ಶೋಧದಿಂದಾಗಿ, ಚರ್ಮದ ಸಲುವಾಗಿ ಮುಗ್ಧ ಪ್ರಾಣಿಗಳನ್ನು ಕೊಲ್ಲುವ ಕಾಯಕ ಕೊನೆಗೊಳ್ಳುವ ಸಾಧ್ಯತೆಯೂ ಇದೆ. ಅದೆಂತಾ ಸಂಶೋಧನೆ ಅಂತೀರಾ? ಅದುವೇ ಸಸ್ಯಜನ್ಯ ನಕಲಿ ಚರ್ಮದ ಉತ್ಪಾದನೆ.

ಮರುಭೂಮಿಯಲ್ಲಿ ಯಥೇಚ್ಛವಾಗಿ ಕಂಡುಬರುವ ಪಾಪಸ್ಸುಕಳ್ಳಿಯ ಎಲೆಗಳಿಂದ ಥೇಟ್ ಚರ್ಮದಂತೆ ಕಾಣುವ ಬ್ಯಾಗ್‌ಗಳನ್ನು ತಯಾರಿಸಲಾಗಿದೆ. ಇದಕ್ಕೆ 'ಡೆಸಾರ್ಟೋ' ಎಂಬ ಹೆಸರೂ ಇಡಲಾಗಿದೆ.

ಈ ಸಾಹಸಕ್ಕೆ ಕೈ ಹಾಕಿದವರು ಮೆಕ್ಸಿಕೊದ ಕೃಷಿಕರಾದ ಅಡ್ರಿಯನ್ ಲೋಪೇಜ್ ವೆಲಾರ್ಡ್ ಮತ್ತು ಮಾರ್ಟೆ ಕ್ಯಾಜೇರೇಜ್. 'ಪೇಟಾ ಸೇರಿ ಎಲ್ಲ ಪ್ರಾಣಿಪ್ರಿಯರು ಹೆಮ್ಮೆ ಪಡುವಂಥ ಪ್ರಯೋಗ ನಡೆಸಿದ್ದಾರೆ.

ಮೆಕ್ಸಿಕೊದಲ್ಲಿ ಸ್ಥಳೀಯವಾಗಿ ಸಿಗುವ ನೋಪಲ್ ಜಾತಿಯ ಪಾಪಸ್ಸುಕಳ್ಳಿಯನ್ನು ಬಳಸಿ ಇದನ್ನು ತಯಾರಿಸಲಾಗಿದೆ. ಸ್ಥಳೀಯ ಆಹಾರದಲ್ಲಿಯೂ ಈ ಪಾಪಸ್ಸುಕಳ್ಳಿ ಪ್ರಾಧಾನ್ಯ ಪಡೆದಿದೆ.

ಗಟ್ಟಿಯಾದ ದಪ್ಪಗಿರುವ ನೋಪಲ್ ಪಾಪಸ್ಸುಕಳ್ಳಿಯನ್ನು ಹಲವು ಹಂತಗಳಲ್ಲಿ ಸಂಸ್ಕರಿಸಲಾಗಿದ್ದು, ಅದು ಚರ್ಮವನ್ನು ಹೋಲುತ್ತದೆ. ಈ ರೀತಿಯ ನಕಲಿ ಚರ್ಮವನ್ನು ಅಭಿವೃದ್ಧಿಗೊಳಿಸಲು ಈ ಇಬ್ಬರು ಗೆಳೆಯರು ಸೇರಿ 'ಅಡ್ರಿನೊ ಡಿ ಮಾರ್ಟೆ' ಎಂಬ ಕಂಪನಿಯೊಂದನ್ನು ಹುಟ್ಟುಹಾಕಿದ್ದಾರೆ.

ಹಲವು ವರ್ಷಗಳಿಂದ ಸ್ನೇಹಿತರಾಗಿದ್ದ ಅವರು ಪೀಠೋಪಕರಣ ತಯಾರಿಕೆ, ಫ್ಯಾಷನ್ ಉದ್ಯಮದಲ್ಲಿಯೂ ಕೆಲಕಾಲ ತೊಡಗಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಚರ್ಮೋದ್ಯಮಗಳಿಂದ ನಿಸರ್ಗಕ್ಕೆ ಆಗುವ ಹಾನಿಯನ್ನು ಮನಗಂಡಿದ್ದರು. ಪರಿಸರದ ಬಗ್ಗೆ ಅಪಾರ ಪ್ರೀತಿಯನ್ನು ಇಟ್ಟುಕೊಂಡಿರುವ ಈ ಗೆಳೆಯರು 18 ತಿಂಗಳ ಹಿಂದೆ ವೃತ್ತಿಯನ್ನು ತೊರೆದರು. ಬದುಕಿನಲ್ಲಿ ಸಾರ್ಥಕತೆ ತರುವ ಕೆಲಸ ಮಾಡಬೇಕೆಂದು ಪಣ ತೊಟ್ಟರು.

ಲೋಪೇಜ್ ಹೇಳುವಂತೆ, 'ಕ್ಯಾಜೇರೇಜ್ ಗಮನಿಸಿದಂತೆ ಫ್ಯಾಷನ್ ಉದ್ಯಮವು ಪರಿಸರವನ್ನು ಶೋಷಿಸುತ್ತಿದೆ. ರಾಸಾಯನಿಕ ಗೊಬ್ಬರವನ್ನು ಬಳಸಿ ಹತ್ತಿಯನ್ನು ಬೆಳೆಯಲಾಗುತ್ತಿದೆ. ಹಾಗೆಯೇ ಬಳಸಿದ ಮತ್ತು ಬಳಕೆಯಾಗದ ಹತ್ತಿಯನ್ನು ಸುಡಲಾಗುತ್ತಿದೆ. ಕೆಲವೊಮ್ಮೆ ಭೂಮಿಯಲ್ಲಿ ಹೂಳಲಾಗುತ್ತಿದೆ.'

'ಭೂಮಿ ಸೇರಿ ಬಹುಪಾಲು ನೈಸರ್ಗಿಕ ಸಂಪನ್ಮೂಲಗಳು ಮನುಷ್ಯನ ದುರಾಸೆಯಿಂದ ಆಗುವ ಅನಾಹುತವನ್ನು ಎದುರಿಸುತ್ತಿವೆ. ಹಾಗಾಗಿ ನಾವು ಪಾಪಸ್ಸುಕಳ್ಳಿಯಿಂದ ನಕಲಿ ಚರ್ಮವನ್ನು ತಯಾರಿಸುವ ಯೋಚನೆಗೆ ಬಂದೆವು'. ಸುಸ್ಥಿರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಕೊಡಬೇಕಿದ್ದು, ಪರಿಸರ ಕಾಳಜಿಯನ್ನು ಗಮನದಲ್ಲಿಕೊಳ್ಳಬೇಕು ಎನ್ನುವ ಆಶಯ ಅವರದ್ದು.

## ಹಾನಿಕಾರಕ ರಾಸಾಯನಿಕದಿಂದ ದೂರ

ಪಾಪಸ್ಸುಕಳ್ಳಿಯ ಎಲೆಗಳನ್ನು ಪರಿಷ್ಕರಿಸಿ ಬ್ಯಾಗು ಮಾಡುವಾಗ ಯಾವುದೇ ರೀತಿಯ ರಾಸಾಯನಿಕ ಪದಾರ್ಥವನ್ನು ಬೆರೆಸದೇ ಇರುವುದು ಈ ಉತ್ಪನ್ನಗಳ ಮತ್ತೊಂದು ವಿಶಿಷ್ಟತೆ. ಅವು 10 ವರ್ಷಗಳ ಕಾಲ ಬಾಳಿಕೆ ಬರಬಲ್ಲವಂತೆ.

ಚರ್ಮದ ಬ್ಯಾಗುಗಳ ತಯಾರಿಕೆಯಲ್ಲಿ ನೂರಾರು ಪ್ರಾಣಿಗಳು ಪ್ರಾಣ ತೆರಬೇಕು. ಚರ್ಮವನ್ನು ಸಂಸ್ಕರಿಸುವಾಗ ಹಾನಿಕಾರಕ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಆ ಪ್ರಕ್ರಿಯೆಯಲ್ಲಿ ಅಪಾರ ಪ್ರಮಾಣದ ನೀರು ಪೋಲಾಗುತ್ತದೆ. ಈ ಎಲ್ಲ ಪ್ರಕ್ರಿಯೆಯಿಂದಾಗಿ ಚರ್ಮ ಕೈಗಾರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಇಂಗಾಲವನ್ನು ವಾತಾವರಣಕ್ಕೆ ಬಿಡುತ್ತವೆ.

ಇಟಲಿಯ ಮಿಲಾನ್‌ನಲ್ಲಿ ಕಳೆದ ಅಕ್ಟೋಬರ್‌ನಲ್ಲಿ ನಡೆದ ಮೇಳದಲ್ಲಿ ಸಸ್ಯಜನ್ಯ ನಕಲಿ ಚರ್ಮದ ಬ್ಯಾಗ್ ಅನ್ನು ಪ್ರದರ್ಶಿಸಲಾಗಿತ್ತು. ಈ ಸಸ್ಯಜನ್ಯ ಉತ್ಪನ್ನ ಶೇ. 50ರಷ್ಟು ಜೈವಿಕವಾಗಿ ಕರಗಬಲ್ಲದು. ಶುದ್ಧ ಸಾವಯವ ಪದ್ಧತಿಯಿಂದಲೇ ಅದನ್ನು ತಯಾರಿಸಲಾಗಿದೆ.

ಪಾಪಸ್ಸು ಕಳ್ಳಿಯಿಂದ ತಯಾರಾದ ಬ್ಯಾಗುಗಳು ಫ್ಯಾಷನ್‌ಪ್ರಿಯರ ಹೃದಯ ಕದಿಯುತ್ತವೆಯೇ ಎಂಬುದನ್ನು ಕಾದು ನೋಡಬೇಕಿದೆ. ■